**ಚಾಸಾ-6 ಪ್ರಾಸಾ-5**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ.5703/2017**

| | |
|---|---|
| **ಸಾಕ್ಷಿದಾರರ ಹೆಸರು** | ರಂಗಮ್ಮ, |
| **ಗಂಡನ ಹೆಸರು** | ರಘುನಾಥ್, |
| **ವಯಸ್ಸು** | 69 ವರ್ಷ |
| **ಉದ್ಯೋಗ** | ನಿವೃತ್ತ ಸಿನಿಯರ್ ಮ್ಯಾನೇಜರ್, ಇಂಡಿಯನ್ ಬ್ಯಾಂಕ್, ಸರ್ವಿಸ್ ಶಾಖೆ. |
| **ವಾಸ** | ದಟ್ಟ ಹಳ್ಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ. |
| **ಪ್ರಮಾಣೀಕರಿಸಿದ ದಿನಾಂಕ** | 11.02.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು ಸಿನಿಯರ್ ಮ್ಯಾನೇಜರ್, ಇಂಡಿಯನ್ ಬ್ಯಾಂಕ್, ಸರ್ವಿಸ್ ಶಾಖೆಯಲ್ಲಿ 2014 ರಿಂದ 2018ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದ ಆರೋಪಿ ನನಗೆ ಗೊತ್ತಿಲ್ಲ. ಇಂಡಿಯನ್ ಬ್ಯಾಂಕಿನ ಪೀಣ್ಯ ಶಾಖೆಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢ ಶಾಲೆಯ ಎರಡು ಖಾತೆಗಳು ಇದ್ದವು. ಆರೋಪಿಯು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿದ್ದರು ಮತ್ತು ಅವರು ಒಟ್ಟು ರೂ.1,12,000/-ಗಳನ್ನು ಮೂರು ಚೆಕ್ಕುಗಳಲ್ಲಿ ಹಣವನ್ನು ಡ್ರಾ ಮಾಡಿಕೊಂಡಿರುತ್ತಾರೆ. ಅದೇ ರೀತಿ ರೂ.3,311/-ನ ಮತ್ತೊಂದು ಚೆಕ್ಕು ಬಂದಿತ್ತು, ಸದರಿ ಚೆಕ್ಕನ್ನು ಕಾಲೇಜಿನವರು ಎ.ಇ.ಇ., ಬೆಸ್ಕಾಂ, ಪೀಣ್ಯ ರವರ ಹೆಸರಿಗೆ ನೀಡಿದ್ದರು. ಸದರಿ ರೂ.3,311/- ಚೆಕ್ಕನ್ನು ನಾನು ಪಾಸ್ ಮಾಡಿದ್ದೇನು. ಆರೋಪಿಯು ಚೆಕ್ಕನ್ನು ಇಶ್ಯೂ ಮಾಡಿ ಹಣವನ್ನು ಡ್ರಾ ಮಾಡಿಕೊಂಡಿರುವ ಬಗ್ಗೆ ನನಗೆ ನಂತರ ತಿಳಿಯಿತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ ನಾನು ಅವರಿಗೆ ವಿಚಾರವನ್ನು ತಿಳಿಸಿರುತ್ತೇನೆ.

**ಪಾಟೀ ಸವಾಲು : ಶ್ರೀ.ಕೆ.ಎಲ್. ಆರೋಪಿ ಪರ ವಕೀಲರಿಂದಃ**

ರೂ.3,311/- ಚೆಕ್ಕನ್ನು ನಮ್ಮ ಬ್ಯಾಂಕಿನವರೇ ದಿ ಪ್ರಿನ್ಸಿಪಾಲ್ ಗೌವರ್ನಮೆಂಟ್ ಪಿಯುಸಿ ಕಾಲೇಜ್ ಎಂದು ಪ್ರಿಂಟ್ ಮಾಡಿರುತ್ತಾರೆ ಎಂದರೆ ಸರಿ. ಪ್ರಿನ್ಸಿಪಾಲ್ ರವರು ಆಗಾಗ ವರ್ಗಾವಣೆಯಾಗುತ್ತಾರೆ. ಆದರೆ ಅಕೌಂಟ್ ಮಾತ್ರ ಸಂಬಂಧಿಸಿದ ಕಾಲೇಜಿಗೆ ಬ್ಯಾಂಕಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಚೆಕ್ ಬುಕ್ ನ್ನು ನಮ್ಮ ಬ್ಯಾಂಕಿನಿಂದಲೇ ಬರೆದು ಕಾಲೇಜಿನ ವಿಳಾಸಕ್ಕೆ ಕಳುಹಿಸಿರುತ್ತೇವೆ ಎಂದರೆ ಸರಿ. ನಮ್ಮ ಇಂಡಿಯನ್ ಬ್ಯಾಂಕ್, ಪೀಣ್ಯ ಶಾಖೆಯಲ್ಲಿ ಸರ್ಕಾರಿ ಪದವಿ

**ಚಾಸಾ-6 ಪ್ರಾಸಾ-5**

ಪೂರ್ವ ಕಾಲೇಜು ಮತ್ತು ಪ್ರೌಢ ಶಾಲೆ ವಿಭಾಗಳಿಗೆ ಪ್ರತ್ಯೇಕವಾದ ಖಾತೆಗಳು ಇರುತ್ತವೆ ಎಂದರೆ ಸರಿ. ಪ್ರೌಢ ಶಾಲೆ ವಿಭಾಗಕ್ಕೆ ಖಾತೆ ಇರುವ ಬಗ್ಗೆ ಪ್ರಿನ್ಸಿಪಾಲ್, ಪದವಿ ಪೂರ್ವ ಕಾಲೇಜಿನವರಿಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ನಮ್ಮ ಇಂಡಿಯನ್ ಬ್ಯಾಂಕ್ ಶಾಖೆಯಲ್ಲಿ ಕಾಲೇಜು ವಿಭಾಗದ ಖಾತೆಯ ಮೇಲೆ ಪ್ರೌಢ ಶಾಲಾ ವಿಭಾಗ ಎಂದು ಮತ್ತು ಪ್ರೌಢ ಶಾಲಾ ವಿಭಾಗದ ಖಾತೆಯ ಮೇಲೆ ಸರ್ಕಾರಿ ಪದವಿ ಪೂರ್ವ ಕಾಲೇಜು ಎಂದು ತಪ್ಪಾಗಿ ಸಿಸ್ಟಮ್ ನಲ್ಲಿ ನಮೂದು ಇತ್ತು ಎನ್ನುವ ಬಗ್ಗೆ ನನಗೆ ಗೊತ್ತು. ಸದರಿ ತಪ್ಪನ್ನು ನಮ್ಮ ಇಂಡಿಯನ್ ಬ್ಯಾಂಕ್ , ಪೀಣ್ಯ ಶಾಖೆಯವರು ಮಾಡಿರುತ್ತಾರೆ ಎಂದರೆ ಸರಿ. ಸದರಿ ಚೆಕ್ಕಿನ ಮೇಲೆ ದಿ ಪ್ರಿನ್ಸಿಪಾಲ್ ಗೌರ್ವನ್ಮೆಂಟ್ ಪ್ರಿ ಯೂರ್ನಿವಸಿಟಿ ಎಂದು ನಮೂದು ಇದುದ್ದರಿಂದ ಪ್ರಿನ್ಸಿಪಾಲ್ ರವರು ಸಹಿ ಮಾಡಿ ಬೆಸ್ಕಾಂ ಬಿಲ್ಲನ್ನು ಚೆಕ್ ಮೂಲಕ ಪಾವತಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಿನ್ಸಿಪಾಲ್ ರವರಿಗೆ ನಾವು ಪ್ರೌಢ ಶಾಲಾ ವಿಭಾಗದ ಖಾತೆಯ ಚೆಕ್ಕನ್ನು ಉಪಯೋಗಿಸಿಕೊಂಡಿರುತ್ತೇವೆ ಎಂದು ಅವರ ಗಮನಕ್ಕೆ ಬಂದಿರುವುದಿಲ್ಲ ಎಂದರೆ ಸರಿ. ಸುಮಾರು ತಿಂಗಳುಗಳ ಕಾಲ ಈ ರೀತಿ ತಪ್ಪಾಗಿರುವುದು ನಮ್ಮ ಬ್ಯಾಂಕಿನವರ ಗಮನಕ್ಕೆ ಬಂದಿದ್ದು, ನಂತರ ನಮ್ಮ ಬ್ಯಾಂಕಿನವರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಖಾತೆಯಲ್ಲಿದ್ದ ಹಣವನ್ನು ಪ್ರೌಢ ಶಾಲಾ ವಿಭಾಗದ ಖಾತೆಗೆ ಹಣವನ್ನು ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಬ್ಯಾಂಕಿನವರು ಮಾಡಿರುವ ತಪ್ಪಿನಿಂದ ಪ್ರಿನ್ಸಿಪಾಲ್ ರವರು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**